



ಆಭರಣ ವಿನ್ಯಾಸಕಿ
ಪ್ರತಿಭಾ ವೀರು

# ಹೆಣ್ಣಿನ ಅಂದಕ್ಕೆ ಮಣ್ಣಿನ ಆಭರಣ

ಸೀರೆ, ಕುರ್ತಾ, ಜೀನ್ಸ್ ಹೀಗೆ ಸಕಲ ಉಡುಪಿಗೂ ಸರಳವಾಗಿ ಹೊಂದುವ ಮಣ್ಣಿನ ಆಭರಣಗಳು (ಟೆರಕೋಟಾ ) ಧರಿಸಲಷ್ಟೇ ಸುಲಭವಲ್ಲ, ಬೆಲೆಯಲ್ಲೂ ಕೈಗೆಟುಕುವಂಥದ್ದು. ದೇಸಿ ಶೈಲಿಯ ಈ ಆಭರಣಗಳು ಎಲ್ಲಾ ವಯೋಮಾನದವರಿಗೂ ಆಪ್ಯಾಯಮಾನ.

■ ಮಂಜುಶ್ರೀ ಎಂ.ಕಡಕೋಳ

ಹೆಣ್ಮಕ್ಕಳಿಗೆ ತಾವು ಧರಿಸುವ ದಿರಿಸಿಗೆ ತಕ್ಕಂತೆ ಆಭರಣ ಧರಿಸಿದರೆ ಮಾತ್ರ ಅಲಂಕಾರ ಪೂರ್ಣವಾದ ಭಾವ. ಆದರೆ, ಪ್ರತಿ ಉಡುಪಿಗೂ ತಕ್ಕಂತಹ ಚಿನ್ನ, ಬೆಳ್ಳಿಯ ಆಭರಣ ಹೊಂದಿಸುವುದು ಕಷ್ಟವೇ. ಇನ್ನು ಪ್ಲಾಸ್ಟಿಕ್, ಮೆಟಲ್ ಆಭರಣಗಳನ್ನು ಧರಿಸಿದರೂ ಕೆಲವೊಮ್ಮೆ ಅವು ಅಷ್ಟಾಗಿ ಲುಕ್ ಕೊಡುವುದಿಲ್ಲ. ಈ ಕೊರತೆಯನ್ನು ನೀಗಿಸಲೆಂದೇ ಮಾರುಕಟ್ಟೆಯಲ್ಲೀಗ ಬಗೆಬಗೆಯ ಮಣ್ಣಿನ ಆಭರಣಗಳು ಬಂದಿವೆ.

ಮಣ್ಣಿನ ಗುಣವೇ ಅಂಥದ್ದು. ಮಣ್ಣಿನ ವಾಸನೆಯಷ್ಟೇ ಅಲ್ಲ, ಅದರಲ್ಲಿ ತಯಾರಾದ ಸಣ್ಣ ವಸ್ತುವಿಗೂ ದೇಸಿಯ ಸೊಬಗಿದೆ. ಮಣ್ಣು ಮನಸಿಗಷ್ಟೇ ಅಲ್ಲ ಮೈಯಿಗೂ ಒಪ್ಪುವ ಗುಣವಂತೆ.

ಹೌದು. ಮಣ್ಣಿನಿಂದ ಮಾಡಿದ ಬಗೆಬಗೆ ವಿನ್ಯಾಸದ ಆಭರಣಗಳು ಈಗ ಹೆಣ್ಣಿನ ಮೈಯನ್ನು ಅಲಂಕರಿಸುತ್ತಿವೆ. ವಿವಿಧ ಬಣ್ಣಗಳಲ್ಲಿ ಉಡುಪಿಗೆ ತಕ್ಕಂತೆ ದೊರೆಯುವ ಟೆರಕೋಟಾ  ಆಭರಣಗಳು ಎಲ್ಲಾ ವಯೋಮಾನದವರಿಗೂ ಆಪ್ಯಾಯಮಾನ.

ಮಣ್ಣಿನ ಆಭರಣಗಳು ದೇಸಿಯ ಸೊಬಗಿನ ಜತೆಗೆ ಪರಿಸರ ಸ್ನೇಹಿಯೂ ಹೌದು. ಇಷ್ಟ ಬಂದಷ್ಟು ದಿನ ಬಳಸಿ ಬಿಸಾಡಿದರೂ ಈ ಆಭರಣಗಳು ಪರಿಸರಕ್ಕೆ ಹಾನಿ ಮಾಡುವುದಿಲ್ಲ. ಮಣ್ಣಲ್ಲಿ ಮಣ್ಣಾಗಿ ಕರಗಿ ಹೋಗುತ್ತವೆ ಎಂಬುದೇ ಈ ಆಭರಣಗಳ ವಿಶೇಷ.

ಪ್ರಯಾಣದ ಸಮಯದಲ್ಲೂ ಇಂಥ ಆಭರಣಗಳನ್ನು ಸುಲಭವಾಗಿ ಕೊಂಡೊಯ್ಯಬಹುದು. ಕಳ್ಳತನವಾಗುವ ಭಯವಿಲ್ಲ. ಕಳೆದುಹೋದರೂ ಮತ್ತೊಮ್ಮೆ ಕಡಿಮೆ ಬೆಲೆಯಲ್ಲೇ ಇಂಥ ಆಭರಣಗಳನ್ನು ಖರೀದಿಸಬಹುದು.

## ಎಲ್ಲರಿಗೂ ಇಷ್ಟ



‘ಟೆರಕೋಟಾ  ಆಭರಣಗಳು ನಿಮ್ಮನ್ನು ನೂರು ಜನರಲ್ಲಿ ಎದ್ದು ಕಾಣುವಂತೆ ಮಾಡುತ್ತವೆ. ದೇಸಿಯ ಸಂಸ್ಕೃತಿಯನ್ನು ಬಿಂಬಿಸುವ ಈ ಆಭರಣಗಳು ಮೈ–ಮನಸ್ಸಿಗೆ ಸಂತಸವನ್ನೂ ನೀಡುತ್ತದೆ. ಕಡಿಮೆ ಬೆಲೆಯಲ್ಲಿ ಹೆಚ್ಚು ಸುಂದರವಾಗಿ ಕಾಣಲು ಮಣ್ಣಿನ ಆಭರಣಗಳು ಉತ್ತಮ ಆಯ್ಕೆ’.